## 4. ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ, ರಾಮನಗರ.

ನಮ್ಮ ಶಾಲೆಯಲ್ಲಿ ಯಶಸ್ವಿ ಸಾಧನೆ ಮಾಡುವಲ್ಲಿ ಆರಂಭದಲ್ಲಿ ಬಹಳ ಸಮಸ್ಯೆಗಳನ್ನು ಎದುರಿಸಬೇಕಾಯಿತು. ನಾವು ಎದುರಿಸಿದ ಸಮಸ್ಯೆಗಳೇನೆಂದರೆ ಗ್ರಾಮದಲ್ಲಿ ಗ್ರಾಮಸ್ಥರಲ್ಲಿ ಸರ್ಕಾರಿ ಶಾಲೆ ಎಂದರೆ ಮುಜುಗರವಾಗುತ್ತಿತ್ತು ಹಾಗೂ ಇವರ ಹಿರಿಮೆಗೆ ಧಕ್ಕೆಯಾಗುತ್ತದೆ ಎಂಬ ಭಾವನೆ ಮೂಡಿ ನಮ್ಮ ಸರ್ಕಾರಿ ಶಾಲೆಯಲ್ಲಿ ದಾಖಲಾತಿ ಕಡಿಮೆಯಾಗಲು ಕಾರಣವಾಯಿತು.

ಈ ಗ್ರಾಮದ ಐತಿಹಾಸಿಕ ಒಂದು ನೋಟವೇನೆಂದರೆ ರಾಮನಗರ ಮೊಟ್ಟ ಮೊದಲಿಗೆ ಗೊಬ್ಬ ಊರು ಎಂದು ಹೆಸರಲ್ಲಿ ಹೆಸರುವಾಸಿಯಾಗಿ ರಾಮನಗರ ಎಂದು ಪರಿವರ್ತನೆಯಾಯಿತು.

ರಾಮನಗರ ಪುಟ್ಟಗ್ರಾಮವಾದರೂ ಮೈಸೂರು ಮಹಾರಾಜರ ಆಡಳಿತ ಕಾಲದಲ್ಲಿ ಈ ಗ್ರಾಮ ಕುಸ್ತಿಪಟುಗಳಿಗಾಗಿ ಹೆಸರು ಗಳಿಸಿದ ಹೆಮ್ಮೆ ಹಾಗೂ ಗ್ರಾಮದ ಕುಸ್ತಿಪಟು ದಿ||ಸೈಯದ್ ಖಲೀಲ್ (ಗಬ್ಬೂರ-ಖಲೀಲ್) ಮೈಸೂರು ಮಹಾರಾಜರ ಅರಮನೆ ಕುಸ್ತಿ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ವೀರ ಎಂದು ಹೆಸರು ಗಳಿಸಿದ ಹಿರಿಮೆಯು ಒಂದು. ಇವರು ಸಹ ನಮ್ಮ ಉರ್ದು ಶಾಲೆಯಲ್ಲಿಯೇ ವಿದ್ಯಾಭ್ಯಾಸ ಮಾಡಿರುವುದು ಒಂದು ಸಂತಸ.

**ಉರ್ದು ಶಾಲೆಯ ಸ್ಥಾಪನೆ :**

ಈ ಶಾಲೆ 1929 ರಲ್ಲಿ ರಾಮನಗರದ ಮಸೀದಿಯ ಒಂದು ಮದ್ರೆಸಾ ಕೊಠಡಿಯಲ್ಲಿ ಪ್ರಾರಂಭವಾಯಿತು. ಅಂದಿನ ಶಾಲಾ ದಾಖಲೆಗಳು ಇಂದಿಗೂ ಇವೆ. ಆ ಕಾಲದಲ್ಲಿ ಕನ್ನಡ ಶಾಲೆ ಇಲ್ಲದ ಕಾರಣ ಹಿಂದುಜನಗಳು ಸಹ ಉರ್ದು ಶಾಲೆಯಲ್ಲಿ ಉರ್ದು ಓದಿರುವುದನ್ನು ಶಾಲಾ ದಾಖಲೆಗಳು ಹೇಳುತ್ತವೆ.

1954ರಲ್ಲಿ ಈ ಶಾಲೆ ಸರ್ಕಾರಿ ಶಾಲೆಯಾಗಿ, ಕಟ್ಟಡ ದೊರಕಿಸಿಕೊಂಡು ಗ್ರಾಮದ ಮಕ್ಕಳಲ್ಲಿ ವಿದ್ಯಾಭ್ಯಾಸ ನೀಡುತ್ತ ಸಾಗುತ್ತಲಿದೆ. ಈ ಗ್ರಾಮವು 1189 ಜನಸಂಖ್ಯೆ ಹೊಂದಿದ್ದು ಇದರಲ್ಲಿ 76 ಕುಟುಂಬಗಳಲ್ಲಿ 407 ಮುಸ್ಲಿಂ ಜನಾಂಗದವರು ವಾಸಿಸುತ್ತಿದ್ದಾರೆ

**ಶಾಲಾ ದಾಖಲಾತಿ :**

2006-07ರಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರಗೆ ಶಾಲೆಯ ಒಟ್ಟು ದಾಖಲಾತಿ-26. ತದನಂತರ ವರ್ಷದಿಂದ ವರ್ಷಕ್ಕೆ ಜನಸಂಖ್ಯಾನುಸಾರ ಮಕ್ಕಳ ದಾಖಲಾತಿಯಲ್ಲಿ ಏರಿಕೆಯಾಗುತ್ತ 2018-19 ರಲ್ಲಿ ಒಟ್ಟು ದಾಖಲಾತಿ 40 ಆಗಿ ಪ್ರಗತಿಯತ್ತ ಸಾಗುತ್ತಿರುವುದು ಹೆಮ್ಮೆಯ ಸಂಗತಿ.

2006-07 ರಲ್ಲಿ (ಹತ್ತುವರ್ಷದ ಹಿಂದೆ) ಶಾಲೆಯ ಸ್ಥಿತಿ ಬಹಳ ಅವ್ಯವಸ್ಥಿತವಾಗಿತ್ತು. 2010-11 ರಿಂದ ಶಾಲೆಯ ಮೇಲ್ಛಾವಣಿ, ನೆಲ, ಕಾಂಪೌಂಡ್ ಇತ್ಯಾದಿ ಕೆಲಸಗಳನ್ನು ಬಹಳ ಶ್ರಮವಹಿಸಿ ಗ್ರಾಮ

ಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಹಾಗೂ ಗ್ರಾಮಸ್ಥರು ಪೋಷಕರ ಸಹಕಾರದೊಂದಿಗೆ ಒಂದು ಕಾರ್ಯರೂಪಕ್ಕೆ ತಂದು ಯಶಸ್ವಿಯಾಗಿರುವುದು ಹೆಮ್ಮೆ ಎನಿಸುತ್ತದೆ.

**ಶಾಲೆಯ ಪ್ರಸ್ತುತ ಸ್ಥಿತಿ :**

ಶಾಲೆಯ ಪ್ರಸ್ತುತ ಸ್ಥಿತಿ ಕಂಡು ಬಹಳ ಸಂತಸವಾಗುತ್ತದೆ. ಶಾಲೆ "ಪರಿಸರ ಮಿತ್ರ" ಎಂಬ ಹಸುರೀಕರಣವಾಗಿ ಪರಿವರ್ತಿಸಿರುವುದು ವಿಶೇಷ. ಶಾಲೆಯಲ್ಲಿ ಮಕ್ಕಳ ಬಿಸಿಯೂಟಕ್ಕೆ ಬಳಸುವ ತರಕಾರಿಗಳು, ಬದನೆಕಾಯಿ, ಮೂಲಂಗಿ, ಸೋರೆಕಾಯಿ, ಹಿರೇಕಾಯಿ, ಬಣ್ಣದ ಸೌತೆಕಾಯಿ, ಬೀನ್ಸ್ , ನುಗ್ಗೆಕಾಯಿ ಇತ್ಯಾದಿ ಬಗೆ ಬಗೆಯ ತರಕಾರಿ ಮತ್ತು ಸೊಪ್ಪು ಬೆಳೆಯಲು ಪ್ರತ್ಯೇಕ ಕೈತೋಟ ಹಾಗೂ ಅಲಂಕಾರಿಕ ಸಸ್ಯ, ಬಗೆ ಬಗೆಯ ಹೂವಿನ ಸಸ್ಯಗಳು ಹಲವಾರು ಬಣ್ಣಗಳ ಗುಲಾಬಿ, ಮಲ್ಲಿಗೆ, ಸಂಪಿಗೆ, ಸೇವಂತಿಗೆ, ಸುಗಂಧರಾಜ, ಚೆಂಡುಹೂ ಇತ್ಯಾದಿ ಮತ್ತು ಧನ್ವಂತರಿ ಸಸ್ಯಗಳಾದ ಅಮೃತಬಳ್ಳಿ ಕಿಡ್ನಿಸ್ಟೋನ್, ಮಧುಮೇಹ, ಒಮಿನಕಾಳು, ಹಗಲಕಾಯಿಬಳ್ಳಿ ಇತ್ಯಾದಿಗಳನ್ನು ಬೆಳೆಸಲಾಗಿದೆ ಹಾಗೂ ಧಾರ್ಮಿಕ ಮಹತ್ವ ಪಡೆದಿರುವ ತುಳಸಿ ಸಸ್ಯಗಳ ಪ್ರತ್ಯೇಕ ಕೈತೋಟವನ್ನು ನಿರ್ವಹಿಸುವಲ್ಲಿನ ಶ್ರಮ ಶ್ಲಾಘನೀಯ.

**ಶಾಲಾ ಮಕ್ಕಳ ಪೋಷಕರೊಡನೆ ಸಂಬಂಧ :**

ನಮ್ಮ ಶಾಲೆಯ ವಿಶೇಷತೆಯಲ್ಲಿ ಒಂದು ಅಚ್ಚರಿಯ ಸಂಗತಿ ಏನೆಂದರೆ, ಗ್ರಾಮದ ಜನರಲ್ಲಿ ಮಹಿಳೆಯರಲ್ಲಿ ಗುಂಪುಗಾರಿಕೆ, ದ್ವೇಷ ಕಂಡ ನಾವುಗಳು ಇವರನ್ನು ಒಂದುಮಾಡಲು, ಭಿನ್ನಾಭಿಪ್ರಾಯ ಬಗೆಹರಿಸುವ ನಿಟ್ಟಿನಲ್ಲಿ ಒಂದು ಯೋಜನೆ ರೂಪಿಸಿ ಶಾಲಾ ಮಕ್ಕಳ ಪೋಷಕರೊಡನೆ ಶಾಲಾ ಮಕ್ಕಳ ಪ್ರವಾಸಕೆ ಕರೆ ನೀಡಿ ಅದರಲ್ಲಿ ಯಶಸ್ವಿಯಾದೆವು. ಈ ಪ್ರವಾಸದಿಂದ ಗ್ರಾಮದ ಜನರಲ್ಲಿ ಪೋಷಕ ಮಹಿಳೆಯರಲ್ಲಿ ಒಗ್ಗಟ್ಟು ಮೂಡಿಬಂದದ್ದು ವಿಶೇಷ. ಇದರಿಂದ ಎಲ್ಲರೂ ಪ್ರೀತಿ, ವಿಶ್ವಾಸದಿಂದ ಗ್ರಾಮದಲ್ಲಿ ಒಟ್ಟಾಗಿ ಬದುಕುವಲ್ಲಿ ಯಶಸ್ವಿಯಾಗಿದ್ದಾರೆ.

**ಮುಖ್ಯ ಶಿಕ್ಷಕರ ಹಾಗೂ ಸಹ ಶಿಕ್ಷಕರ ಸಹಕಾರ ಮತ್ತು ಕರ್ತವ್ಯ :**

ಮುಖ್ಯ ಶಿಕ್ಷಕರ ಕರ್ತವ್ಯ ಪಾಲನೆಯೊಂದಿಗೆ ಸಹ ಶಿಕ್ಷಕರು ಸಹ ತಮ್ಮ ತಮ್ಮ ಅನುಭವವನ್ನು ಅಚ್ಚುಕಟ್ಟಾಗಿ ಚಾಚುತಪ್ಪದೆ ಶ್ರಮವಹಿಸಿ ಮುಖ್ಯ ಶಿಕ್ಷಕರೊಡನೆ ವೈಮನಸ್ಸಿಲ್ಲದೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಕರ್ತವ್ಯ ನಿರ್ವಹಿಸುತ್ತಿರುವುದು ಶಾಲೆಯ ಪ್ರಗತಿಯ ಒಂದು ಭಾಗವಾಗಿರುವುದು ಹೆಮ್ಮೆಯ ವಿಷಯ.

**ಸಂತಸದ ಕಲಿಕೆ :** ಮಕ್ಕಳಲ್ಲಿ ಸಂತಸದ ಕಲಿಕೆಯಾಗುತ್ತಿದೆ. ಮಕ್ಕಳು ಕಲಿಕೆಯಲ್ಲಿ ಉತ್ಸಾಹದಿಂದ ಭಗವಹಿಸುತ್ತಿರುತ್ತಾರೆ. ಮಕ್ಕಳು ಸ್ಪಷ್ಟ ಓದು, ಶುದ್ಧಬರಹ, ಸರಳ ಲೆಕ್ಕ ಮತ್ತು ಆಂಗ್ಲಭಾಷೆಯನ್ನು ಸರಾಗವಾಗಿ ಕಲಿಯುತ್ತಿದ್ದಾರೆ. ಮಕ್ಕಳ ಸ್ಮರಣಾಶಕ್ತಿ ವೃದ್ಧಿಸುತ್ತಿದೆ. ಮಕ್ಕಳ ಅಧ್ಯಯನದ ಜೊತೆಗೆ, ಮಕ್ಕಳು ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಿಸುವ ನಿಟ್ಟಿನಲ್ಲಿ ನಾವೆಲ್ಲಾ ಶಿಕ್ಷಕರು ಕಂಕಣಬದ್ಧರಾಗಿದ್ದೇವೆ.

ಪ್ರತಿ ವರ್ಷ ನಮ್ಮ ಶಾಲೆಯ 5ನೇ ತರಗತಿಯ ಮಕ್ಕಳು ಮೊರಾರ್ಜಿ ವಸತಿ ಶಾಲೆಗೆ ಆಯ್ಕೆಯಾಗುತ್ತಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಮಕ್ಕಳು ದಾಖಲಾಗುವುದು ನಮ್ಮ ಶಾಲಾ ಸಾಧನೆ ಎಂದು ಹೇಳಲು ನಮಗೆ ಹೆಮ್ಮೆಯಾಗುತ್ತದೆ.

ಈ ಸಾಧನೆಗೆ ಕಾರಣ ಕಲಿಕೋಪಕರಣಗಳು (ಟಿಎಲ್ಎಂ) ಹಾಗೂ ನಲಿ ಕಲಿ ತರಗತಿಯ ಕೊಠಡಿಗಳಲ್ಲಿ ಅಳವಡಿಸಿಕೊಂಡಿರುವ ಪಾಠೋಪಕರಣಗಳು ಮಕ್ಕಳನ್ನು ಕಲಿಕೆಯ ಕಡೆ ಆಕರ್ಷಿಸುತ್ತದೆ ಹಾಗೂ ಶಾಲಾ ಕಟ್ಟಡ, ತರಗತಿ ಕೊಠಡಿಗಳು, ಶಾಲಾ ಆವರಣ, ಶೌಚಾಲಯಗಳು ಸ್ವಚ್ಛತೆಯಲ್ಲಿ ಅತ್ಯುತ್ತಮವಾಗಿರುತ್ತದೆ.

**ಎಸ್‌ಡಿಎಂಸಿ ಸಹಕಾರ ಹಾಗೂ ಪೋಷಕರ ಸಹಕಾರ :**

ಶಾಲಾಭಿವೃದ್ಧಿ ಸಮಿತಿ ಮತ್ತು ಶಿಕ್ಷಕ ವರ್ಗದವರು ಒಂದು ನಾಣ್ಯದ ಎರಡು ಮುಖಗಳಂತೆ ಶಾಲಾ ಪ್ರಗತಿಗಾಗಿ ಪೋಷಕರು ಹಾಗೂ ಸಮಿತಿಯವರ ಸಹಕಾರ ಎಂದೆಂದಿಗೂ ಮರೆಯಲಾಗದು. ಇವರೆಲ್ಲರ ಸಹಕಾರದಿಂದ ಶಾಲೆಯಲ್ಲಿ ಪ್ರತಿವರ್ಷ "ರಕ್ತಗುಂಪಿನ ಉಚಿತ ತಪಾಸಣಾ" ಶಿಬಿರವನ್ನು ಪೋಷಕರು ಹಾಗೂ ಗ್ರಾಮಸ್ಥರಿಗಾಗಿ ಏರ್ಪಡಿಸಲಾಗುತ್ತದೆ. ಪ್ರತಿವರ್ಷ ಮಕ್ಕಳಿಗಾಗಿ ಕ್ರೀಡಾಕೂಟಗಳನ್ನು ಏರ್ಪಡಿಸಿ ಸಮಿತಿ ಮತ್ತು ಪೋಷಕರು ಒಟ್ಟುಗೂಡಿ ಬಹುಮಾನಗಳನ್ನು ವಿತರಿಸುತ್ತಾರೆ. ಇದೆ ರೀತಿ ಪೋಷಕರಿಗೂ ಸಹ ಕ್ರೀಡಾಕೂಟಗಳನ್ನು ಹಮ್ಮಿಕೊಂಡು ಕ್ರೀಡೆಯಲ್ಲಿ ವಿಜೇತರಾದ ಪೋಷಕರಿಗೆ ಶಾಲಾ ಶಿಕ್ಷಕ ಸಿಬ್ಬಂದಿ ವರ್ಗದವರಿಂದ ಬಹಮಾನ ವಿತರಿಸುತ್ತಿರುವುದು ವಿಶೇಷ.

ಪ್ರತಿ ವರ್ಷ ಶಾಲಾ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದು, 2017–18 ನೇ ಸಾಲಿನ ವಾರ್ಷಿಕೋತ್ಸವ ವಿಶೇಷವಾಗಿತ್ತು. ವಿಶೇಷವೇನೆಂದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಮೊಟ್ಟಮೊದಲಿಗೆ ಶಾಲಾ ಸಂಚಿಕೆ ಬಿಡುಗಡೆ ಮಾಡಿದ್ದು, ಜಿಲ್ಲೆಯ ಎಲ್ಲಾ ಉರ್ದು ಶಾಲೆಗಳ ಪೈಕಿ ಕೀರ್ತಿ ತಂದ ಭಾಗ್ಯ ನಮ್ಮದಾಗಿದೆ.

ನಮ್ಮ ಶಾಲೆಯ ಆವರಣಕ್ಕೆ ಎಸ್.ಡಿ.ಎಂ.ಸಿ. ಹಾಗೂ ಪೋಷಕರ ಸಹಕಾರದೊಂದಿಗೆ ಸುಮಾರು ರೂ. 60,000/– ದೇಣಿಗೆಯಿಂದ ತಂತಿ ಬೇಲಿ ನಿರ್ಮಿಸಿದ ಕೀರ್ತಿಯು ನಮ್ಮದಾಗಿದೆ.

**ಸಿಸಿ ಟಿವಿ ಅಳವಡಿಕೆ :**

ಶಾಲೆಯ ಕೈತೋಟದ ಅಲಂಕಾರಿಕ ಹೂವಿನ ಸಸ್ಯಗಳು ಹಾಗೂ ತರಕಾರಿ, ಬೆಳೆಯುತ್ತಿರುವುದನ್ನು ಕೆಲ ಪುಂಡ ಮಕ್ಕಳು ಕದ್ದು ಹಾಳು ಮಾಡುತ್ತಿದ್ದರು. ಇದನ್ನು ತಡೆಗಟ್ಟಲು ರಕ್ಷಣೆಗಾಗಿ ಒಂದು ಉಪಾಯ ಮಾಡಿ ಸಿ.ಸಿ.ಟಿ.ವಿ. ಕ್ಯಾಮರಾ ತರಹದ ಮಾದರಿಯಂತೆ ನಕಲಿ ಕ್ಯಾಮರಾವನ್ನು ತಯಾರಿಸಿ ಶಾಲಾ ಆವರಣದಲ್ಲಿ ಅಳವಡಿಸಿಕೊಂಡಾಗ ಎಲ್ಲರೂ ಇದನ್ನು ಕಂಡು ಗ್ರಾಮಸ್ಥರು ನಿಜವಾದ ಸಿಸಿ ಟಿ.ವಿ. ಕ್ಯಾಮರಾವನ್ನು ಅಳವಡಿಸಿದ್ದಾರೆ ಎಂದು ಭಾವಿಸಿದ್ದರು. ಶಾಲಾ ಮುಂಭಾಗದಲ್ಲಿ ಜನರು ನಿಂತು ನೋಡುತ್ತಿದ್ದರು. ಒಮ್ಮೆ ಅಧಿಕಾರಿಯೊಬ್ಬರು ಶಾಲಾ ಭೇಟಿಗೆ ಬಂದಾಗ

ಭೇಟಿ ಪುಸ್ತಕದಲ್ಲಿ ಸಿಸಿಟಿವಿ ಅಳವಡಿಸಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಆಗ ಅವರಿಗೆ ಅದು ನಕಲಿ ಎಂದು ತಿಳಿಸದೆ, ನಿಜವಾದ ಕ್ಯಾಮರಾವನ್ನು ಅಳವಡಿಸದಿದ್ದರೆ ನಮ್ಮ ಶಾಲೆಯ ಘನತೆಗೆ ಧಕ್ಕೆಯಾಗಬಹುದು ಎಂದು ತೀರ್ಮಾನಿಸಿ ಮುಖ್ಯ ಶಿಕ್ಷಕಿಯಾದ ಶ್ರೀಮತಿ ಜಬೀನ ಕೌಸರ್‌ರವರ ಪತಿ ಶ್ರೀ ರಿಯಾಜ್ ಅಹ್ಮದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆ, ಶಿವಮೊಗ್ಗ ಇವರಿಂದ ರೂ. 25,000/- ದೇಣಿಗೆ ಪಡೆದು ಸಿಸಿ ಟಿವಿ ಕ್ಯಾಮರಾವನ್ನು ಅಳವಡಿಸಲಾಗಿದೆ. ಒಟ್ಟು ನಾಲ್ಕು ಕ್ಯಾಮರಾ ಹಾಗೂ ಟಿವಿ ಅಳವಡಿಸಿ ಕಾರ್ಯನಿರ್ವಹಿಸುತ್ತಿರುವುದು ವಿಶೇಷ.

2017-18ನೇ ಸಾಲಿನಲ್ಲಿ ನಮ್ಮ ಶಾಲೆಗೆ ದಾನಿಗಳಿಂದ ಲ್ಯಾಪ್ ಟಾಪ್‌ನ್ನು ಕೊಡಿಸಿರುತ್ತಾರೆ. ಈಗ ನಾವು ಮಕ್ಕಳಿಗೆ ಕಂಪ್ಯೂಟರ್ ತರಬೇತಿಯನ್ನು ನೀಡುತ್ತಿದ್ದೇವೆ.

ನಮ್ಮ ಶಾಲೆಗೆ ಸುಮಾರು ಪ್ರಶಸ್ತಿಗಳೂ ದೊರಕಿದೆ. ಶಾಲಾಮಟ್ಟ, ಕ್ಲಸ್ಟರ್‌ಮಟ್ಟ ತಾಲ್ಲೂಕು ಮಟ್ಟ ಹಾಗೂ ಜಿಲ್ಲಾಮಟ್ಟ ಪ್ರಶಸ್ತಿಗಳು ಲಭಿಸಿದ್ದು, ವಿವಿಧ ಕಾರ್ಯಕ್ರಮಗಳಲ್ಲಿಯೂ ನಮ್ಮ ಮಕ್ಕಳು ಪ್ರಶಸ್ತಿ ಪಡೆಯುತ್ತಿದ್ದಾರೆ. ಇವೆಲ್ಲರ ಜೊತೆಗೆ ನಮ್ಮ ಶಾಲೆಗೆ 2007-08 ನೇ ಸಾಲಿನಲ್ಲಿ "ಬೆಸ್ಟ್ ಸ್ಕೂಲ್" ಪ್ರಶಸ್ತಿ ಕಂದಾಯ ಇಲಾಖೆಯಿಂದ "ಉತ್ತಮಶಾಲೆ" ರೋಷನಿ ಪತ್ರಿಕೆಯವರಿಂದ ಉತ್ತಮ ಶಾಲಾ ಪ್ರಶಸ್ತಿ ಇತ್ಯಾದಿ ಲಭಿಸಿರುವುದು ಸಂತೋಷ ಹಾಗೂ ಹರುಷ ತಂದಿದೆ.

ನಮ್ಮ ಶಾಲೆಯ ಶಿಕ್ಷಕರು ಕಸದಿಂದ ರಸ ತೆಗೆಯುವಲ್ಲಿ ಯಶಸ್ವಿಯಾಗಿದ್ದಾರೆ. ಹಳೆಯ ಬಕೆಟ್, ಪ್ಲಾಸ್ಟಿಕ್ ಪೈಪ್ ಬಳಸಿ ಧ್ವನಿವರ್ಧಕವನ್ನು ತಯಾರಿಸಿಕೊಂಡಿದ್ದಾರೆ. ಕ್ರಿಯಾಶೀಲ ಶಿಕ್ಷಕರಿರುವುದರಿಂದ ಶಾಲೆ ಪ್ರಗತಿಯತ್ತ ಸಾಗುತ್ತಿದೆ.









